ದಿನಾಂಕ 10/12/2008

ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999– ವಿದೇಶಿ ಪ್ರವಾಸ– ರೂಪಾಯಿಗಳಲ್ಲಿ ಪಾವತಿ ವಿಧಾನ

ಆರ್‌ಬಿಐ/ 2008–09/318

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂ. 40

ಎ.ಪಿ. (ಎಫ್‌ಎಲ್ ಶ್ರೇಣಿ) ಸುತ್ತೋಲೆ ಸಂ. 03

ಡಿಸೆಂಬರ್ 10, 2008

ಗೆ,

I ಮತ್ತು IIನೇ ವರ್ಗದ ಅಧಿಕೃತ ವ್ಯಾಪಾರಿಗಳು ಮತ್ತು ಪೂರ್ಣ ಪ್ರಮಾಣದ ಹಣ ಪರಿವರ್ತಕರು

ಮಾನ್ಯರೆ,

**ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999–**
**ವಿದೇಶಿ ಪ್ರವಾಸ – ರೂಪಾಯಿಗಳಲ್ಲಿ ಪಾವತಿ ವಿಧಾನ**

I ಮತ್ತು IIನೇ ವರ್ಗದ ಅಧಿಕೃತ ವ್ಯಾಪಾರಿಗಳು ಮತ್ತು ಪೂರ್ಣ ಪ್ರಮಾಣದ ಹಣ ಪರಿವರ್ತಕರ (ಎಫ್‌ಎಫ್‌ಎಮ್‌ಸಿಗಳು) ಗಮನವನ್ನು ದಿನಾಂಕ ಅಕ್ಟೋಬರ್ 30, 2000ದ ಎ.ಪಿ(ಡಿಐಆರ್ ಶ್ರೇಣಿ)ಯ ಸುತ್ತೊಲೆ ಸಂಖ್ಯೆ 19ರ ಅನುಬಂಧದ ಪ್ಯಾರ ಎ–10ರ ಕಡೆಗೆ ಸೆಳೆಯಲಾಗಿದೆ. ಇದರಲ್ಲಿ ವಿದೇಶೀ ಪ್ರವಾಸಕ್ಕಾಗಿ(ಖಾಸಗಿ ಭೇಟಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿ) ಅಧಿಕೃತ ವ್ಯಾಪಾರಿಗಳು, ವಿದೇಶೀ ವಿನಿಮಯ ಮಾರಾಟಕ್ಕೆ ಪ್ರತಿಯಾಗಿ ರೂ. 50,000(ರೂಪಾಯಿ ಐವತ್ತು ಸಾವಿರ ಮಾತ್ರ)ವರೆವಿಗೆ ನಗದು ರೂಪದಲ್ಲಿ ಪಾವತಿಯನ್ನು ಸ್ವೀಕರಿಸಬಹುದು. ವಿದೇಶಿ ವಿನಿಮಯದ ಮಾರಾಟವು ರೂ 50,000ಕ್ಕೆ ಸಮನಾದ ಮೊತ್ತವನ್ನು ಮೀರಿದಾಗ ಪಾವತಿಯನ್ನು ಈ ಕೆಳಗಿನಂತೆ ಸ್ವೀಕರಿಸಬೇಕಾಗುತ್ತದೆ–

(i) ಅರ್ಜಿದಾರನ ಖಾತೆಗೆ ಬರೆದ ಕ್ರಾಸ್‌ಮಾಡಿದ ಚೆಕ್ಕು
ಅಥವಾ

(ii) ಅರ್ಜಿದಾರನ ಭೇಟಿಯನ್ನು ಪ್ರಾಯೋಜಿಸುವ ಕಂಪೆನಿ/ ವ್ಯಾಪಾರಸಂಸ್ಥೆಯ ಬ್ಯಾಂಕ್ ಖಾತೆಗೆ ಬರೆದ ಕ್ರಾಸ್ಡ್ ಚೆಕ್ಕು
ಅಥವಾ

(iii) ಬ್ಯಾಂಕರುಗಳ ಚೆಕ್ಕು/ ಪಾವತಿ ಆದೇಶ/ ಡಿಮಾಂಡ್ ಡ್ರಾಫ್ಟ್

2. ವಿದೇಶೀ ವಿನಿಮಯ ಮಾರಾಟಕ್ಕೆ ಪ್ರತಿಯಾಗಿ ಪಾವತಿ ವಿಧಾನವನ್ನು ಸರಳಗೊಳಿಸಲು ರೂಪಾಯಿಗಳಲ್ಲಿ/ ಕ್ರಾಸ್ಡ್ ಚೆಕ್/ ಬ್ಯಾಂಕರುಗಳ ಚೆಕ್/ ಪಾವತಿ ಆದೇಶ/ ಡಿಮಾಂಡ್ ಡ್ರಾಫ್ಟ್ ಮೂಲಕವೂ ಅಲ್ಲದೆ, I ಮತ್ತು IIನೇ ವರ್ಗದ ಅಧಿಕೃತ ವ್ಯಾಪಾರಿಗಳು ಮತ್ತು ಪೂರ್ಣ ಪ್ರಮಾಣದ ಹಣ ಪರಿವರ್ತಕರು ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್/ ಪೂರ್ವ ಪಾವತಿ

ಕಾರ್ಡುಗಳ ಮೂಲಕವೂ ವಿದೇಶೀ ಪ್ರವಾಸಕ್ಕಾಗಿ (ಖಾಸಗೀ ಭೇಟಿ ಅಥವಾ ಇನ್ನಿತರ ಉದ್ದೇಶದ ಪ್ರವಾಸಕ್ಕಾಗಿ) ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಪಾವತಿಯನ್ನು ಸ್ವೀಕರಿಸಬಹುದು:

(i) ಕೆವೈಸಿ/ ಎಎಮ್‌ಎಲ್ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಿರಬೇಕು

(ii)ವಿದೇಶೀ ಕರೆನ್ಸಿಯ ಮಾರಾಟ/ ವಿದೇಶೀ ಕರೆನ್ಸಿ ಪ್ರವಾಸಿ ಚೆಕ್ಕುಗಳ ನೀಡಿಕೆಯು ಬ್ಯಾಂಕ್ ನಿಗದಿಪಡಿಸಿದ ಮಿತಿಯ(ಕ್ರೆಡಿಟ್/ ಪೂರ್ವಪಾವತಿ ಕಾರ್ಡುಗಳು) ಒಳಗಡೆ ಇರಬೇಕು

(iii) ವಿದೇಶೀ ಕರೆನ್ಸಿ/ ವಿದೇಶೀ ಕರೆನ್ಸಿ ಪ್ರವಾಸಿ ಚೆಕ್ಕುಗಳ ಮತ್ತು ಕ್ರೆಡಿಟ್/ ಡೆಬಿಟ್/ ಪೂರ್ವ ಪಾವತಿ ಕಾರ್ಡ್ ಧಾರಕರು ಒಬ್ಬರೇ ಆಗಿರಬೇಕು

3. I ಮತ್ತು IIನೇ ವರ್ಗದ ಅಧಿಕೃತ ವ್ಯಾಪಾರಿಗಳು ಮತ್ತು ಪೂರ್ಣ ಪ್ರಮಾಣದ ಹಣ ಪರಿವರ್ತಕರು ಈ ಸುತ್ತೋಲೆಯಲ್ಲಿ ಆಡಕವಾಗಿರುವ ವಿಷಯಗಳನ್ನು ತಮ್ಮ ಘಟಕಗಳು ಮತ್ತು ಸಂಬಂಧಿತ ಗ್ರಾಹಕರ ಗಮನಕ್ಕೆ ತರಬೇಕು.

4. ಈ ಸುತ್ತೋಲೆಯಲ್ಲಿ ಅಡಕವಾಗಿರುವ ನಿರ್ದೇಶನಗಳನ್ನು ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999ರ ಪ್ರಕರಣ 10(4) ಮತ್ತು ಪ್ರಕರಣ 11(1)ರ ಅಡಿಯಲ್ಲಿ ನೀಡಲಾಗಿದೆ ಮತ್ತು ಇತರ ಯಾವುದೇ ಕಾನೂನಿನ ಅನುಸಾರ ಅಗತ್ಯವಾಗಿರುವ ಅನುಮತಿ/ ಅನುಮೋದನೆಗಳಿಗೆ ಬಾಧಕವಾಗದಂತೆ ನೀಡಲಾಗಿದೆ.

ತಮ್ಮ ವಿಶ್ವಾಸಿ,

**(ಸಲಿಮ್ ಗಂಗಾಧರನ್)**
ಮುಖ್ಯ ಮಹಾ ವ್ಯವಸ್ಥಾಪಕರು- ಪ್ರಭಾರಿ